**OS No.132/2021**
**PW.1**

**<u>ದಿನಾಂಕಃ 01.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ</u>**

ನನ್ನ ತಂದೆ ನನ್ನ ಜೊತೆಯಲ್ಲಿಯೇ ವಾಸವಾಗಿದ್ದಾರೆ. ಆಸ್ತಿ ವಿಚಾರದಲ್ಲಿ ಕಾಗದ ಪತ್ರಗಳನ್ನು ತಯಾರಿಸಲು ನಾನೇ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ. ನನ್ನ ತಂದೆಯ ಹೇಳಿಕೆಯ ಮೇರೆಗೆ ದಾವೆ ಸಲ್ಲಿಸಿರುತ್ತಾರೆ. ವಾದ ಪತ್ರದಲ್ಲಿರುವ ವಿಚಾರಗಳನ್ನು ನನ್ನ ತಂದೆಯೇ ಹೇಳಿರುತ್ತಾರೆ. ಸಿ.ಸಿ 35/2020 ಎಂದು ನನ್ನ ಮತ್ತು ನನ್ನ ತಂದೆಯ ಮೇಲೆ ಪ್ರಕರಣ ಇದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ತಂದೆ ಹಾಜರಾಗುತ್ತಿದ್ದಾರೆ ಎಂದರೆ ಒಂದು ಸಾರಿ ಬಂದು ನಂತರ ಬರುತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಅನಾರೋಗ್ಯದ ಕುರಿತು ದಾಖಲೆಗಳನ್ನು ಹಾಜರುಪಡಿಸಿಲ್ಲ. ಪ್ರತಿವಾದಿ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಓ.ಎಸ್ 208/2020 ಎಂದು ನನ್ನ ವಿರುದ್ಧ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ದಾವಾಸ್ವತ್ತಿನ ಸರ್ವೇ ನಂ. 16/4, 2 ಎಕರೆ 8 ಗುಂಟೆ ವಿಸ್ತೀರ್ಣ ಇರುತ್ತದೆ. ಓ.ಎಸ್ 208/2020 ರ ದಾವೆಯ ವಾದಪತ್ರವನ್ನು ಓದಿದ ನಂತರ ಸದರಿ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸರ್ವೇ ನಂ. 16/3 ಸಿ ಯಲ್ಲಿ 2 ಎಕರೆ 23 ಗುಂಟೆಯನ್ನು ಪ್ರತಿವಾದಿ ಖರೀದಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ.

ಪ್ರತಿವಾದಿ ಮೇಲಿನ ಕ್ರಯಪತ್ರದ ಆಧಾರದ ಮೇಲೆ ಓ.ಎಸ್ 208/2020 ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಓ.ಎಸ್ 208/2020 ರಲ್ಲಿನ ಚೆಕ್ಕುಬಂಧಿಯನ್ನು ಸದರಿ ದಾವೆಯಲ್ಲಿ ನಮೂದಿಸಿರುತ್ತೇವೆ ಎಂದರೆ ಸಾಕ್ಷಿ ನಮ್ಮ ಚೆಕ್ಕುಬಂಧಿಯನ್ನು ಬರೆದಿರುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಅವರ ಸ್ವತ್ತನ್ನು ಖರೀದಿ ಮಾಡಿರುವ ವಿಷಯ ಗೊತ್ತಿಲ್ಲ. ಅವರು ಯಾವಾಗ ಸ್ವತ್ತಿನ ಬಳಿ ಬಂದು ಹೋಗಿ ಮಾಡುತ್ತಾರೆಂದು ಗೊತ್ತಿಲ್ಲ. ಪ್ರತಿವಾದಿಗಳನ್ನು ಭಕ್ತರಹಳ್ಳಿ ಗ್ರಾಮದಲ್ಲಿ ನೋಡಿರುವುದಿಲ್ಲ. ಪ್ರತಿವಾದಿಗಳು ಗಲಾಟೆ ಮಾಡಿರುತ್ತಾರೆಂದು ಸದರಿ ದಾವೆಯನ್ನು ಸಲ್ಲಿಸಿರುತ್ತೇವೆ. ಪ್ರತಿವಾದಿಗಳನ್ನು ನಾನು ನೋಡಿರುವುದಿಲ್ಲ ಎಂದರೆ ಅವರ ಕೂಲಿ ಆಳುಗಳು ಬಂದು ಗಲಾಟೆ ಮಾಡಿ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಸರ್ವೇ ನಂ. 16/3 ಸಿ ಮತ್ತು ದಾವಾಸ್ವತ್ತಿನ ವಿಸ್ತೀರ್ಣಗಳು ಬೇರೆ ಬೇರೆ ಎಂದರೆ ಸರಿ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ಕುಟುಂಬದಲ್ಲಿ ಯಾವುದೇ ಪತ್ರ

ಆಗಿರುವುದಿಲ್ಲ. ದಾವಾಸ್ವತ್ತಿನ ಚೆಕ್ಕುಬಂಧಿಗೆ ಹೋಲುವ ಹಾಗೆ ವಾದ ಪತ್ರವನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ನನ್ನ ತಂದೆ ನ್ಯಾಯಾಲಯಕ್ಕೆ ಬಂದರೆ ಸತ್ಯ ಗೊತ್ತಾಗುತ್ತದೆ ಎಂದು ನಾನು ಜಿ.ಪಿ.ಎ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-47 ರಂತೆ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನ ಮಕ್ಕಳ ಹೆಸರಿನಲ್ಲಿ ಜಂಟಿಯಾಗಿ ದಾವಾಸ್ವತ್ತಿನ ಪಹಣಿ ಬರುತ್ತಿದೆ. ಗೋಪಾಲಕೃಷ್ಣ ಮತ್ತು ಶ್ರೀಧರರವರನ್ನು ಸಾಕ್ಷಿಯಾಗಿ ಮಾಡಿಸಲು ತೊಂದರೆ ಇಲ್ಲ.

ದಾವಾಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದೇನೆ ಎಂದು ತೋರಿಸಲು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಹಿಡುವಳಿ ಪ್ರಮಾಣಪತ್ರವನ್ನು ಪಡೆದುಕೊಂಡಿದ್ದು, ಬೇಕಾದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಚೆಕ್ಕುಬಂಧಿಯಲ್ಲಿರುವ ಸ್ವತ್ತನ್ನು ಪ್ರತಿವಾದಿಗಳು ಈ ಹಿಂದೆಯೇ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಮೂಲತಃ ಭಕ್ತರಹಳ್ಳಿ ಗ್ರಾಮದ ವಾಸಿ. ಅದೇ ಊರಿನ ನರಸಪ್ಪ ಮತ್ತು ಚಿನ್ನಮ್ಮ ಗೊತ್ತು.

**ಮುದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಕಾಲವಕಾಶ ಕೋರಿದ್ದು, ನೀಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**C/C 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ .**